

# ಮನೆಯಿಂದ ಮನೆಗೆ ಹರ್ಮಿಟ್ ಕ್ರ್ಯಾಬ್

**ಶಂಖು ಅಥವಾ ಕಪ್ಪೆಚಿಪ್ಪುಗಳೊಳಗೆ ಜೀವಿಸುವ ಪುಟ್ಟ ಜೀವಿ ಹರ್ಮಿಟ್ ಕ್ರ್ಯಾಬ್‌ನ ಜೀವನ ವಿಧಾನ ಅಚ್ಚರಿ ಹುಟ್ಟಿಸುವಂಥದ್ದು.**

■ ಎಸ್.ಬಿ. ರವಿಕುಮಾರ್

ಅಂಡಮಾನಿನ ಭರತಪುರ ಬೀಚಿನಲ್ಲಿ ಅನೇಕ ಹುಳಗಳು ನೀರಿನಿಂದ ತೀರದ ಕಡೆಗೆ ಓಡುತ್ತಿದ್ದವು. ಯಾರಾದರೂ ಅಡ್ಡಿಪಡಿಸಿದರೆ ಚಕ್ಕನೆ ತಮ್ಮಿಡೀ ದೇಹವನ್ನು ಶಂಖುವಿನೊಳಗೆ ಸೆಳೆದುಕೊಂಡು ಬಲಿಷ್ಠ ಕೊಂಬುಗಳಿಂದ ಮುಚ್ಚಿಕೊಂಡು ರಕ್ಷಣೆ ಪಡೆದುಕೊಳ್ಳುತ್ತಿದ್ದವು. ಮೊದಲು ನಾವು ಇವುಗಳನ್ನು ಶಂಖುಹುಳಗಳೆಂದೇ ತಿಳಿದಿದ್ದೆವು. ಆದರೆ ಇವು ಶಂಖುಹುಳಗಳಾಗಿರಲಿಲ್ಲ.

ಯಾರಾದರೂ ಅಡ್ಡಿಪಡಿಸಿದರೆ ಚಿಪ್ಪಿನಲ್ಲಿ ಬಚ್ಚಿಟ್ಟುಕೊಂಡು ನಿಶ್ಚಲವಾಗುವ, ನಂತರ ನಿಧಾನವಾಗಿ ತಮ್ಮ ಟೆಲಿಸ್ಕೋಪಿನಂಥ ಕಣ್ಣುಗಳನ್ನು ಹೊರಚಾಚಿ ಸುತ್ತಲೂ ಪರಿಶೀಲಿಸಿ ಕ್ಷೇಮವೆನಿಸಿದಾಗ ನಿಧಾನವಾಗಿ ಕಾಲುಗಳನ್ನು ಹೊರಗೆ ಎಳೆದುಕೊಂಡು ಬೆನ್ನ ಮೇಲೆ ಚಿಪ್ಪನ್ನು ಹೊತ್ತುಕೊಂಡು ಓಡುವ ಏಡಿಗಳಿವು. ಇವುಗಳನ್ನು 'ಹರ್ಮಿಟ್ ಕ್ರ್ಯಾಬ್'ಗಳೆಂದು ಕರೆಯುತ್ತಾರೆ. ಇವು ಸಸ್ಯಾಹಾರದ ಜೊತೆಗೆ ಸಣ್ಣ ಪುಟ್ಟ ಕ್ರಿಮಿಕೀಟಗಳನ್ನೂ ತಿನ್ನುತ್ತವೆ.

ಇದುವರೆಗೆ ಕನಿಷ್ಠ ಅಧ್ಯಯನ ಕೈಗೊಂಡಿರುವ ಜೀವಿಗಳಲ್ಲಿ ಇದೂ ಒಂದು. 2020ರಲ್ಲಿ ಒಡಿಶಾದ ಕರಾವಳಿಯಲ್ಲಿ ಮೊದಲ ಬಾರಿಗೆ ಇವುಗಳ ವೈವಿಧ್ಯದ ಬಗ್ಗೆ ಅಧ್ಯಯನ ಕೈಗೊಂಡಾಗ ಭಾರತದ ಕರಾವಳಿಯುದ್ದಕ್ಕೂ ಕಂಡುಬರುವ ಈ ಏಡಿಗಳ ಪ್ರಭೇದಗಳು ತಮಿಳುನಾಡು, ಕೇರಳ ಹಾಗೂ ಅಂಡಮಾನ್ ನಿಕೋಬಾರ್ ದ್ವೀಪದಲ್ಲಿ ಹೆಚ್ಚಾಗಿರುವುದು ಕಂಡುಬಂದಿದೆ.

ಹರ್ಮಿಟ್ ಕ್ರ್ಯಾಬ್ ಸದಾಕಾಲ ಚಿಪ್ಪಿನಲ್ಲೇ ಜೀವಿಸುತ್ತದೆ. ಇಲ್ಲೊಂದು ಕುತೂಹಲಕರ ಸಂಗತಿ ಇದೆ. ಈ ಹರ್ಮಿಟ್ ಕ್ರ್ಯಾಬ್ ತಾನು ವಾಸಿಸುವ ಚಿಪ್ಪುಗಳನ್ನು ಸ್ವತಃ ಸ್ರವಿಸುವುದಿಲ್ಲ. ಬಸವನಹುಳ ಜಾತಿಯ ಹುಳಗಳು ಜೀವಿಸಿ ನಂತರ ಖಾಲಿಯಾದ ಶಂಖುಗಳನ್ನು ಆಯ್ದುಕೊಂಡು ಅದರಲ್ಲಿ ಜೀವಿಸಲಾರಂಭಿಸುತ್ತದೆ. ಉದ್ದವಾದ ಇದರ ಹೊಟ್ಟೆಯ ಭಾಗ ಮೆದುವಾಗಿರುವುದರಿಂದ ಶಂಖುವಿನ ಆಕಾರಕ್ಕೆ ತಕ್ಕಂತೆ ಒಳಸೇರಿಕೊಳ್ಳುತ್ತದೆ.

ಆದರೆ ಅನೇಕ ಏಡಿಗಳು ಹೊರಗೇ ಇರುತ್ತವಲ್ಲ ಎನ್ನುವ ಅನುಮಾನ ಕಾಡುತ್ತಿದೆ ಅಲ್ಲವೇ? ನಿಜ. ಅನೇಕ ಏಡಿಗಳು ಯಾವುದೇ ಶಂಖುಗಳಿಲ್ಲದೆ ಇರುತ್ತವೆ. ಇವುಗಳ ದೇಹಕ್ಕೆ ಎಕ್ಸೋಸ್ಕೆಲಿಟನ್ ಎಂದು ಕರೆಯುವ ಗಟ್ಟಿಯಾದ ಕವಚದ ರಕ್ಷಣೆ ಇದೆ. ಈ ಹರ್ಮಿಟ್ ಕ್ರ್ಯಾಬ್‌ಗೆ ಎಕ್ಸೋಸ್ಕೆಲಿಟನ್ ಇದ್ದರೂ ಹೊಟ್ಟೆಯ ಭಾಗದಲ್ಲಿರುವ ಕವಚ ಗಟ್ಟಿಯಾಗಿರುವುದಿಲ್ಲ. ಇದರಿಂದ ಇದು ಹೊರಗೇ ಇದ್ದರೆ ಈ ಮೆದುವಾದ ಭಾಗ ಒಣಗಿ ತೊಂದರೆಯಾಗುತ್ತದೆ. ಜೊತೆಗೆ ಬೇರೆ ಪ್ರಾಣಿಗಳಿಗೆ ಸುಲಭವಾಗಿ ತುತ್ತಾಗುತ್ತದೆ. ಆದ್ದರಿಂದ ಇದು ಶಂಖುಹುಳದ ಖಾಲಿ ಚಿಪ್ಪನ್ನು ಹುಡುಕಿಕೊಂಡು ಅದರ ಒಳಭಾಗವನ್ನು ತನಗೆ ಬೇಕಾದಂತೆ ಪುನರಚಿಸಿಕೊಂಡು ಅದರಲ್ಲಿ ಜೀವಿಸುತ್ತದೆ.

ಶಂಖು ಅಥವಾ ಚಿಪ್ಪನ್ನು ಪುನರಚಿಸಿಕೊಳ್ಳುವುದು ಬಹಳ ನಿಧಾನ ಪ್ರಕ್ರಿಯೆಯಾದ್ದರಿಂದ ಒಮ್ಮೆ ಏಡಿ ಜೀವಿಸಿದ್ದ ಶಂಖವನ್ನೇ ಇತರೆ ಏಡಿಗಳೂ ಬಳಸುತ್ತವೆ. ಹರ್ಮಿಟ್ ಕ್ರ್ಯಾಬ್‌ಗೆ ಸುತ್ತಲಿನ ವಾತಾವರಣ, ರುಚಿ ಮತ್ತು ವಾಸನೆ ಗ್ರಹಿಸುವ ಎರಡು ಜೊತೆ ಆಂಟೆನಾಗಳು ಹಾಗೂ ಐದು ಜೊತೆ ಕಾಲುಗಳಿವೆ. ಮೊದಲನೇ ಜೊತೆ ಕಾಲುಗಳು ದೊಡ್ಡವಾಗಿ, ಬಲಿಷ್ಠ ಕೊಂಬುಗಳಂತಿವೆ. ತನ್ನ ಗೂಡಿನೊಳಗೆ ಸೇರಿಕೊಂಡ ಮೇಲೆ ಇವುಗಳಿಂದ ಬಾಗಿಲು ಹಾಕಿಕೊಂಡಂತೆ ಮುಚ್ಚಿಕೊಳ್ಳುತ್ತದೆ ಹಾಗೂ ಈ ಕಾಲುಗಳಿಂದಲೇ ಆಹಾರ ಸೇವಿಸುತ್ತದೆ. ಎರಡು ಮತ್ತು ಮೂರನೇ ಜೊತೆ ಕಾಲುಗಳಿಂದ ಓಡಾಡುತ್ತದೆ. ನಾಲ್ಕು ಮತ್ತು ಐದನೇ ಜೊತೆ ಕಾಲುಗಳನ್ನು ಚಿಪ್ಪಿನ ಒಳಭಾಗವನ್ನು ಗಟ್ಟಿಯಾಗಿ ಹಿಡಿದುಕೊಳ್ಳಲು ಉಪಯೋಗಿಸುತ್ತದೆ. ಗಟ್ಟಿಯಾಗಿದ್ದರೂ ಹಗುರವಾಗಿರುವ ಈ ಚಿಪ್ಪುಗಳನ್ನು ಸದಾ ಬೆನ್ನ ಮೇಲೆ ಹೊತ್ತುಕೊಂಡೇ ತಿರುಗುತ್ತದೆ. ಅಪರೂಪಕ್ಕೆ ಇದು ಬೇರೆ ವಸ್ತುಗಳನ್ನೂ ಶಂಖುಗಳಂತೆ ಉಪಯೋಗಿಸುವುದಿದೆ.

ಹರ್ಮಿಟ್ ಕ್ರ್ಯಾಬ್ ಬೆಳೆದಂತೆಲ್ಲಾ ಚಿಪ್ಪು ಸಣ್ಣದಾಗುತ್ತದೆ. ಆಗ ತನ್ನ ದೇಹವನ್ನು ಸಂಪೂರ್ಣ ಒಳಗೆ ಎಳೆದುಕೊಳ್ಳಲಾಗದಿದ್ದರೆ ತನಗೆ ಸರಿಯಾದ ಅಳತೆಯ ಚಿಪ್ಪನ್ನು ಆಯ್ಕೆ ಮಾಡಿಕೊಂಡು ಹಳೆಯದರಿಂದ ಸ್ಥಳಾಂತರಗೊಳ್ಳುತ್ತದೆ. ಈ ಪ್ರಕ್ರಿಯೆಯೂ ಕುತೂಹಲಕಾರಿ. ತನಗೆ ಸೂಕ್ತ ಚಿಪ್ಪನ್ನು ಹುಡುಕುವಾಗ ಈ ಏಡಿಗಳು ಗುಂಪುಗೂಡಿ ದೊಡ್ಡದರಿಂದ ಸಣ್ಣದವರೆಗೆ ಸಾಲಾಗಿ ನಿಲ್ಲುತ್ತವೆ. ದೊಡ್ಡ ಏಡಿಗೆ ಸೂಕ್ತ ಚಿಪ್ಪು ಸಿಕ್ಕಿತೋ ಅದು ಮೆಲ್ಲನೆ ಹೊರಬಂದು ಪರಿಶೀಲಿಸಿ ಸೂಕ್ತವೆನಿಸಿದರೆ ಅದರಲ್ಲಿ ಸೇರಿಕೊಳ್ಳುತ್ತದೆ. ಇಲ್ಲವಾದರೆ ವಾಪಸು ತನ್ನ ಹಳೆಯ ಚಿಪ್ಪಿಗೇ ಹಿಂತಿರುಗುತ್ತದೆ. ಒಮ್ಮೆ ದೊಡ್ಡ ಏಡಿ ಹಳೆಯ ಚಿಪ್ಪನ್ನು ಕೈ ಬಿಟ್ಟಿತೋ ಉಳಿದ ಎಲ್ಲವೂ ಸರಣಿಯಲ್ಲಿ ತಮ್ಮ ತಮ್ಮ ಮನೆಗಳನ್ನು ಬದಲಾಯಿಸಿಕೊಳ್ಳುತ್ತವೆ.

ಕೆಲವೊಮ್ಮೆ ಹೊಸ ಚಿಪ್ಪು ಸೂಕ್ತವಲ್ಲವೆಂದು ಹಳೆಯ ಶಂಖಕ್ಕೆ ಹಿಂತಿರುಗುವಷ್ಟರಲ್ಲೇ ಬೇರೊಂದು ಏಡಿ ಅದನ್ನು ಆಕ್ರಮಿಸಿಕೊಂಡುಬಿಟ್ಟರೆ ಇದಕ್ಕೆ ಮನೆಯಿಲ್ಲದಂತಾಗಿ ಬೇರೆ ಪ್ರಾಣಿಗಳಿಗೆ ಆಹಾರವಾಗುತ್ತದೆ. ಇತರೆ ಏಡಿಗಳೊಡನೆ ಹೊಡೆದಾಡಿ ತನಗೆ ಬೇಕಾದ ಚಿಪ್ಪನ್ನು ಪಡೆದುಕೊಳ್ಳುವುದೂ ಉಂಟು.

ಬೆಳೆದಂತೆಲ್ಲ ಇವುಗಳ ಎಕ್ಸೋಸ್ಕೆಲಿಟನ್ ಬಿಗಿಯಾಗಿ, ಹಾವು ಪೊರೆ ಬಿಡುವಂತೆ ಇದು ಎಕ್ಸೋಸ್ಕೆಲಿಟನ್ ತ್ಯಜಿಸುತ್ತದೆ. ಇದನ್ನು 'ಮೋಲ್ಟಿಂಗ್' ಎನ್ನುತ್ತಾರೆ. ಸಾಮಾನ್ಯವಾಗಿ 12ರಿಂದ 18 ತಿಂಗಳಿಗೊಮ್ಮೆ ಇದು ಮೋಲ್ಟ್ ಮಾಡುತ್ತದೆ. ವಯಸ್ಸಿಗೆ ಬಂದ ಹೆಣ್ಣು ಗಂಡು ಭಾಗಶಃ ತಮ್ಮ ಚಿಪ್ಪಿನಿಂದ ಹೊರಬಂದು ಕೂಡಿ ಮತ್ತೆ ಚಿಪ್ಪಿನಲ್ಲಿ ಸೇರಿಕೊಳ್ಳುತ್ತವೆ. ಹೆಣ್ಣು ಮೊಟ್ಟೆಗಳನ್ನು ತನ್ನ ಚಿಪ್ಪಿನೊಳಗೇ ಇಟ್ಟುಕೊಂಡು ಕಾಪಾಡುತ್ತದೆ. ಒಂದು ತಿಂಗಳಾದಾಗ ಅವುಗಳನ್ನು ಸಮುದ್ರದೊಳಗೆ ಬಿಡುತ್ತದೆ. ಲಾರ್ವಾಗಳು ಬೆಳೆದು ಮುಂದೆ ಚಿಪ್ಪುಗಳಲ್ಲಿ ಸೇರಿಕೊಳ್ಳುತ್ತವೆ.

ಪ್ರತಿಕ್ರಿಯಿಸಿ: feedback@sudha.co.in